# ಆಹಾ ಸುದ್ದಿ!

★ ಸಸಿತೋಟ

ಆಸ್ಟ್ರೇಲಿಯಾದ ಗೋಲ್‌ಬರ್ನ್ ಪಟ್ಟಣದಲ್ಲಿ ಇತ್ತೀಚೆಗೆ ಭಾರಿ ಮಳೆ ಸುರಿಯಿತು. ಆದರೆ ಮಳೆ ನೀರಿನ ಹನಿ ಬದಲು ಸಾವಿರಾರು ಜೇಡಗಳನ್ನು ಸುರಿಸಿತು. ಮರಗಳ ಮೇಲಿನ ಬಲೆಯನ್ನು ಪ್ಯಾರಾಶೂಟ್‌ನಂತೆ ಬಳಸುವ ಅವುಗಳ ತಂತ್ರ ಉಲ್ಟಾ ಆಗಿದ್ದು, ಹವಾಮಾನ ತಜ್ಞರು ಇನ್ನು ಮುಂದೆ ಭಾರಿ ಜೇಡಗಳ ಸುರಿಮಳೆ ಎಂದು ಮುನ್ಸೂಚನೆ ನೀಡಬೇಕಾಗಬಹುದು.



ಅಮೆರಿಕದ ಮಾಜಿ ಒಲಿಂಪಿಕ್ ಚಾಂಪಿಯನ್ ಬ್ರೂಸ್ ಜೆನ್ನರ್ ವ್ಯಾನಿಟಿ ಫೇರ್ ನಿಯತಕಾಲಿಕಕ್ಕೆ ನೀಡಿದ ಫೋಟೊ ಪೋಸ್. ಬ್ರೂಸ್ ಎಂಬ ಹೆಸರನ್ನು ಹಿಂದೆ ಬಿಟ್ಟು ಕ್ಯಾಟ್ಲಿನ್ ಆಗಿರುವ 65ರ ವಯಸ್ಸಿನ ಆತ/ ಆಕೆ 'ನಾನು ಅವನಲ್ಲ' ಎಂದು ಘೋಷಿಸಿಕೊಂಡಿದ್ದಾನಂತೆ. ಮೊದಲಿನಿಂದಲೂ ಹೆಣ್ಣು ಹೃದಯವಿತ್ತು ಎಂದಿರುವ ಬ್ರೂಸ್‌ಗೆ ಹೆಣ್ಣಾಗಲು ಮೂರು ಮದುವೆ, ಆರು ಮಕ್ಕಳನ್ನು ಪಡೆದ ನಂತರವಾದರೂ ಸಾಧ್ಯವಾಯಿತಲ್ಲ.

ಚಿಂಪಾಂಜಿಗಳೂ ಆಹಾರವನ್ನು ಬೇಯಿಸಿ ತಿನ್ನಲು ಇಷ್ಟಪಡುತ್ತವಂತೆ. ಕಾಂಗೋ ಗಣರಾಜ್ಯದಲ್ಲಿ ನಡೆಸಿದ ಸಂಶೋಧನೆಯಲ್ಲಿ ಅವು ಹಸಿ ಗೆಣಸನ್ನು ತಿನ್ನದೇ ವಿಜ್ಞಾನಿಗಳು ನೀಡಿದ ಹೀಟರ್ ಮೇಲಿಟ್ಟು ಬೇಯಿಸಿ ತಿಂದವಂತೆ. ಬೇಯಿಸುವುದು ಮಾನವನ ಗುಣ ಇರಬಹುದು, ಆದರೆ ಹಸಿವಾದರೂ ಹಸಿ ಗೆಣಸನ್ನು ತಿನ್ನದೇ ಬೇಯುವವರೆಗೆ ಕಾದು ತಿಂದಿದ್ದು ಯಾರಿಂದ ಬಂದಿದೆಯೋ!



ನ್ಯೂಯಾರ್ಕ್‌ನಲ್ಲಿ ಇತ್ತೀಚೆಗೆ ನಡೆದ ಕಲಾ ಪ್ರದರ್ಶನವಿದು. 2978 ಬಿಯರ್ ಕ್ಯಾನುಗಳನ್ನು ಜೋಡಿಸಿ ಕಲೆಯನ್ನು ಹೊಮ್ಮಿಸಲಾಗಿತ್ತು. ಕಲೆಯ ಕಿಕ್ ಕೊಡಲು ಈ ಖಾಲಿ ಬಿಯರ್ ಕ್ಯಾನುಗಳು ಸಫಲವಾದವಂತೆ.



ಜಪಾನಿನ ಹೊಸ ರೊಬಾಟ್ ಒಹಾನಾಸ್. ಇದನ್ನು ಬ್ಲೂಟೂಥ್ ಮೂಲಕ ಸ್ಮಾರ್ಟ್‌ಫೋನ್‌ಗೆ ಸಂಪರ್ಕಿಸಿದರೆ ಸಾಕು, ನಿಮಗೆ ಬೇಕಾದ ಮಾಹಿತಿಯನ್ನು ಹೇಳಲು ಆರಂಭಿಸುತ್ತದಂತೆ. ನೀವು ಅದರ ಜೊತೆ ಸಂಭಾಷಿಸುತ್ತ, ನಿಮಗೆ ಬೇಕಾದ ಖಾಸಗಿ, ಆಹಾರ, ಭವಿಷ್ಯ, ಹವಾಮಾನ ಮೊದಲಾದವುಗಳ ಬಗ್ಗೆ ಮಾಹಿತಿ ಕೇಳಬಹುದು. ನಿಮ್ಮ ಪ್ರಶ್ನೆಗಳಿಗೆ ಉತ್ತರಿಸುತ್ತ ಹೋಗುತ್ತದೆ. ಜನಸಂಖ್ಯೆ ಇಳಿಮುಖವಾಗುತ್ತಿರುವ ಜಪಾನ್ ಮಕ್ಕಳ ಸಂಖ್ಯೆ ಹೆಚ್ಚು ಮಾಡುವುದು ಹೇಗೆ ಎಂಬುದರ ಬಗ್ಗೆ ಸಂಶೋಧನೆ ನಡೆಸುವುದು ಬಿಟ್ಟು, ಯಂತ್ರಮಾನವ ಸಂಗಾತಿಗಳನ್ನು ಕೊಡುತ್ತ ಸಾಗಿದೆ.

ಚೀನಾದ ಲಿಯು 16ನೇ ಅಂತಸ್ತಿನಲ್ಲಿ ನಗ್ನನಾಗಿ ನಿಂತು ಪೊಲೀಸರು ಬಂದರೆ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಬೆದರಿಸಿದನಂತೆ. ಇದರ ಹಿಂದೆ ಏನೋ ಬಲವಾದ ಕಾರಣದ ವಾಸನೆ ಹೊಡೆದ ಕಾರಣ ಪೊಲೀಸರು ಆತನ ಅಪಾರ್ಟ್‌ಮೆಂಟ್ ತಪಾಸಣೆ ಮಾಡಿದಾಗ ತಾಯಿಯನ್ನು ಕೊಂದು, ಸಹೋದರಿ ಮೇಲೆ ಮಾರಣಾಂತಿಕ ಹಲ್ಲೆ ಮಾಡಿದ್ದು ಗೊತ್ತಾಯ್ತಂತೆ. ಕೊನೆಗೂ ಪೊಲೀಸರ ಅತಿಥಿಯಾದ ಈತ ಆತ್ಮಹತ್ಯೆ ನಾಟಕವಾಡಿ ಪೊಲೀಸರನ್ನು ಕರೆಸಿಕೊಂಡಿದ್ದು ಯಾಕೋ!

